

# ಗ್ಲಾಸ್ಗೊ ನೆಕ್ರೋಪೊಲಿಸ್ ಸಮಾಧಿಗಳ ನಗರದಲ್ಲಿ...

‘ಸತ್ತವರ ನಗರ’ ಎಂದೇ ಕರೆಸಿಕೊಳ್ಳುವ ಸ್ಕಾಟ್ಲೆಂಡ್‌ನ ಗ್ಲಾಸ್ಗೊ ನೆಕ್ರೋಪೊಲಿಸ್, ಸುಮಾರು 3500 ಸಮಾಧಿಗಳನ್ನೊಳಗೊಂಡ ಜಾಗ.

■ ಸುಭದ್ರ ನೇಗಿಲೋಣಿ

ಪ್ರೀತಿಪಾತ್ರರು ಸಾವನ್ನಪ್ಪಿದಾಗ ಅವರ ನೆನಪಿಗಾಗಿ ಸಮಾಧಿ ಕಟ್ಟಿಸುವುದು ಶತಶತಮಾನಗಳ ಹಿಂದಿನಿಂದಲೂ ನಡೆದುಬಂದಿರುವ ರೂಢಿ. ದೇಶಕ್ಕಾಗಿ ಪ್ರಾಣತೆತ್ತ ಯೋಧರ, ಇತಿಹಾಸ ನಿರ್ಮಿಸಿದವರ ಕಾರ್ಯ, ಶೌರ್ಯ, ತ್ಯಾಗಗಳನ್ನು ಜಗತ್ತಿಗೆ ಸಾರಲು, ಅದನ್ನು ಸ್ಮರಿಸಲು ಸ್ಮಾರಕಗಳನ್ನು ನಿರ್ಮಿಸುವ ಕೆಲಸವನ್ನು ಬಹುತೇಕ ಎಲ್ಲ ದೇಶಗಳೂ ಮಾಡಿವೆ.

ಸ್ಕಾಟ್ಲೆಂಡಿನ ಗ್ಲಾಸ್ಗೊ ಎಂಬಲ್ಲಿ ಕೂಡ ಇಂಥ ಸಮಾಧಿ, ಸ್ಮಾರಕಗಳಿವೆ. ಇತಿಹಾಸದ ಓಣಿಯಂತೆ ಕಾಣುವ ಸಮಾಧಿಗಳ ಬೀದಿಯೇ ಇಲ್ಲಿದೆ. ನೆಕ್ರೋಪೊಲಿಸ್ ನಗರದಲ್ಲಿರುವ ಈ ಸಮಾಧಿಗಳು ವಿಕ್ಟೋರಿಯನ್ ಕಾಲದ್ದಾಗಿದ್ದು, 1833ರಲ್ಲಿ ಅಧಿಕೃತವಾಗಿ ಈ ಸ್ಮಶಾನವನ್ನು ತೆರೆಯಲಾಯಿತು.

ಗ್ಲಾಸ್ಗೊ ನೆಕ್ರೋಪೊಲಿಸ್ ಕ್ಯಾಥಡ್ರೆಲ್‌ನ ಹಿಂಭಾಗದ ಬೆಟ್ಟದ ಮೇಲೆ, ಸೇಂಟ್ ಮುಂಗೋಸ್ ಚರ್ಚ್ ಪೂರ್ವ ಭಾಗದಲ್ಲಿ ಇದು ಸ್ಥಾಪನೆಗೊಂಡಿದೆ. ವಿಕ್ಟೋರಿಯನ್ ಉದ್ಯಾನ ಹಾಗೂ ಸ್ಮಶಾನವಾಗಿ ಇದನ್ನು ರಚಿಸಲಾಗಿದ್ದು, ವಿಕ್ಟೋರಿಯನ್ ಕಾಲದ ಮಹಾನ್ ವ್ಯಕ್ತಿಗಳ ಗೋರಿಗಳು ಇಲ್ಲಿ ಇತಿಹಾಸ ಸಾರುತ್ತಿವೆ. ಆಗಿನ ಕಾಲದಲ್ಲಿ ಸುಮಾರು ಐವತ್ತು ಸಾವಿರ ಜನರನ್ನು ಇದೇ ಜಾಗದಲ್ಲಿ ಹೂಳಲಾಗಿದ್ದು, ಅದರಲ್ಲಿ ಕೆಲವು ಸಮಾಧಿಗಳ ಮೇಲೆ ಮಾತ್ರ ಹೆಸರುಗಳು ಉಳಿದುಕೊಂಡಿವೆ. ಕಲಾವಿದರು, ವಕೀಲರು, ವಾಸ್ತುಶಿಲ್ಪಿಗಳು, ಪರಿಶೋಧಕರು, ವಿಕ್ಟೋರಿಯನ್ ಗಣ್ಯರ ಸಮಾಧಿಗಳನ್ನು ವಿಶೇಷವಾಗಿ ರೂಪಿಸಲಾಗಿದೆ. ಎಲ್ಲ ಸಮಾಧಿಗಳು ಕಲ್ಲಿನದಾಗಿದ್ದು, ಸುಮಾರು 3500 ಗೋರಿಗಳನ್ನು ನಿರ್ಮಾಣ ಮಾಡಲಾಗಿದೆ. ಗ್ಲಾಸ್ಗೊದಲ್ಲಿನ ಅತ್ಯುತ್ತಮ ಐತಿಹಾಸಿಕ ಹೆಗ್ಗುರುತುಗಳಲ್ಲಿ ಈ ‘ನೆಕ್ರೋಪೊಲಿಸ್’ ಕೂಡ ಒಂದಾಗಿದೆ.

ನೆಕ್ರೋಪೊಲಿಸ್‌ನಲ್ಲಿ, ಮರಣ ಹೊಂದಿದ ವ್ಯಕ್ತಿಯ ಹೆಸರು, ಉದ್ಯೋಗ, ವಯಸ್ಸು, ಲಿಂಗ, ಅವರ ಸಾವಿನ ಹಿಂದಿನ ಕಾರಣ ಮುಂತಾದ ದಾಖಲೆಗಳನ್ನು ಸಂಗ್ರಹಿಸಿಡಲಾಗಿದೆ. ಇಲ್ಲಿ ಆಧುನಿಕ ಪ್ರಭಾವಿ ವ್ಯಕ್ತಿಗಳ ಸಮಾಧಿಗಳೂ ಸ್ಥಾನ ಪಡೆದುಕೊಂಡಿವೆ. ಗಣ್ಯರ ಹೊರತಾಗಿ ಸಮುದಾಯ ಹಿತಕ್ಕಾಗಿ ಹೋರಾಡಿದವರಿಗೂ ಪ್ರತ್ಯೇಕ ಸ್ಥಾನವನ್ನು ಮೀಸಲಿಡಲಾಗಿದೆ.

ದಾಖಲೆಗಳ ಪ್ರಕಾರ, ಜೋಸೆಫ್ ಲೆವಿ ಎಂಬ ಯಹೂದಿ ವ್ಯಾಪಾರಿಯನ್ನು ಇಲ್ಲಿ ಮೊದಲು ಸಮಾಧಿ ಮಾಡಲಾಗಿದೆ. ಈ ಜಾಗವನ್ನು ಸ್ಮಶಾನವನ್ನಾಗಿ ರೂಪಿಸುವ ಮೊದಲೇ, ಅಂದರೆ 1832ರಲ್ಲಿಯೇ ಈ ವ್ಯಕ್ತಿಯನ್ನು ಇಲ್ಲಿ ಸಮಾಧಿ ಮಾಡಲಾಗಿತ್ತು ಎನ್ನುತ್ತದೆ ಇತಿಹಾಸ.



ಈ ಸ್ಮಾರಕ, ಗೋರಿಗಳ ವಿನ್ಯಾಸ ಕೂಡ ಗಮನಸೆಳೆಯುವಂತಿದೆ. ಅಲೆಕ್ಸಾಂಡರ್ ಥಾಮ್ಸನ್ ಎಂಬಾತ ಗೋರಿಗಳನ್ನು ವಿನ್ಯಾಸ ಮಾಡಿದರೆ, ಜಾನ್ ಬ್ರೈಸ್ ಹಾಗೂ ಡೇವಿಡ್ ಹ್ಯಾಮಿಲ್ಟನ್ ಎಂಬುವರು ಇದರ ವಾಸ್ತುಶಿಲ್ಪವನ್ನು ರೂಪಿಸಿದರು ಎನ್ನಲಾಗಿದೆ.

37 ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಈ ಸ್ಮಶಾನ ಚೆಂದದ ಉದ್ಯಾನದ ನಡುವೆ ರೂಪಿತಗೊಂಡಿರುವುದು ವಿಶೇಷ. ಲ್ಯಾಟಿನ್‌ನಲ್ಲಿ ‘ನೆಕ್ರೋಪೊಲಿಸ್’ ಅಂದರೆ ‘ಸತ್ತವರ ನಗರ’ ಎಂದರ್ಥ. ಹೀಗಾಗಿ ಸಮಾಧಿಗಳೇ ತುಂಬಿರುವ ಈ ಜಾಗವನ್ನು ಜೇಮ್ಸ್ ಸ್ಟೀವನ್ಸ್ ಕರ್ಲ್ ಎಂಬಾತ ‘ಸತ್ತವರ ನಗರ’ ಎಂದೇ ಕರೆದ. ಆಗಿನಿಂದ ಇದು ‘ಸಿಟಿ ಆಫ್ ಡೆಡ್’ ಎಂದೇ ಜನಪ್ರಿಯವಾಯಿತು.

ಗ್ಲಾಸ್ಗೊದ ನೆಕ್ರೋಪೊಲಿಸ್, ಅದ್ಭುತ ವಾಸ್ತುಶಿಲ್ಪ ಹಾಗೂ ಸುಂದರ ಉದ್ಯಾನದೊಂದಿಗೆ ಮನಸ್ಸಿಗೆ ಶಾಂತಿಯನ್ನು ತಂದುಕೊಡುವ ತಾಣವಾಗಿಯೂ ಗುರುತಿಸಿಕೊಂಡಿದೆ. ಹಸುರು ತುಂಬಿದ ಭೂದೃಶ್ಯ ಮೋಹಕವಾಗಿದೆ. ಬಹುಸಂಸ್ಕೃತಿಯ ಜೀವನಶೈಲಿಯ ಈ ನಗರದ ಬಗ್ಗೆ ತಿಳಿದುಕೊಳ್ಳುವುದು ಬಹಳ ಇದೆ ಎಂಬ ಭಾವ ಇಲ್ಲಿಗೆ ಭೇಟಿ ಕೊಟ್ಟವರ ಮನದಲ್ಲಿ ಉಳಿದುಕೊಳ್ಳುವುದಂತೂ ಖಚಿತ.

ಪ್ರತಿಕ್ರಿಯಿಸಿ: feedback@sudha.co.in